अहं सर्वेषु भूतेषु भूतात्मावस्थितः सदा ।
तमवज्ञाय मां मर्त्यः
कुरुतेऽर्चाविडम्बनम् ॥

ಸರ್ವಭೂತಗಳಲ್ಲಿಯೂ ನನ್ನನ್ನು ನೋಡಬೇಕು. ಹಾಗೆ ಮಾಡದೇ ಕೇವಲ ಪ್ರತಿಮೆಗಳನ್ನು ಪೂಜಿಸುವುದು ನನಗೆ ಸಮ್ಮತವಲ್ಲ. ನಾನು ಎಲ್ಲ ಭೂತಗಳಲ್ಲಿಯೂ ಅವುಗಳ ಆತ್ಮನಾಗಿ ವಿರಾಜಮಾನನಾಗಿದ್ದೇನೆ. ಅಂತಹ ನನ್ನನ್ನು ಅನಾದರಿಸಿ ಕೇವಲ ವಿಗ್ರಹಗಳಲ್ಲಿ ಪೂಜಿಸುವುದು ತೋರಿಕೆಯ ಪೂಜೆಯಾಗುತ್ತದೆ; ಪೂಜೆಯ ವಿಡಂಬನೆಯಾಗುತ್ತದೆ.

यो मां सर्वेषु भूतेषु
सन्तमात्मानमीश्वरम् ।
हित्वार्चां भजते मौढ्याद्
भस्मन्येव जुहोति सः ॥

ಎಲ್ಲಕ್ಕೂ ಆತ್ಮವಾಗಿ ಪರಮೇಶ್ವರನಾಗಿರುವ ನಾನು ಎಲ್ಲ ಭೂತಗಳಲ್ಲಿಯೂ ಇರುವೆನು. ಹೀಗಿದ್ದರೂ ಮೋಹವಶನಾಗಿ ಎಲ್ಲರಲ್ಲೂ ಇರುವ ನನ್ನನ್ನು ಉಪೇಕ್ಷೆಮಾಡಿ, ಕೇವಲ ಪ್ರತಿಮೆಗಳ ಪೂಜೆಯಲ್ಲಿಯೇ ತತ್ಪರನಾಗಿರುವವನು ಮಾಡುವ ಆರಾಧನೆಯು ಬೂದಿಯಲ್ಲಿ ಹೋಮಮಾಡಿದಂತೆ ಆಗುವುದು.

द्विषतः परकाये मां मानिनो भिन्नदर्शिनः ।
भूतेषु बद्धवैरस्य न मनः शान्तिमृच्छति ॥

ಭೇದದೃಷ್ಟಿಯುಳ್ಳವನಾಗಿ, ಅಭಿಮಾನದಿಂದ ಕೂಡಿ, ಇತರ ಜೀವಿಗಳಲ್ಲಿ ವೈರವನ್ನು ಕಟ್ಟಿಕೊಳ್ಳುವವನು ಅವುಗಳ ದೇಹಗಳಲ್ಲಿ ಇರುವ ಆತ್ಮನಾದ ನನ್ನನ್ನು ದ್ವೇಷಿಸಿದಂತೆಯೇ ಆಗುತ್ತದೆ. ಅಂತಹವರ ಮನಸ್ಸಿಗೆ ಎಂದೆಂದಿಗೂ ಶಾಂತಿಯು ದೊರೆಯುವುದಿಲ್ಲ.

अहमुच्चावचैर्द्रव्यैः क्रिययोत्पन्नयानघे ।
नैव तुष्येऽर्चितोऽर्चायां
भूतग्रामावमानिनः ॥

ಅಮ್ಮಾ! ಯಾವನು ಇತರ ಜೀವಿಗಳಿಗೆ ಅವಮಾನ ಮಾಡುತ್ತಾನೆಯೋ ಆತನು, ಸಾಮಾನ್ಯವಾದ ಮತ್ತು ಶ್ರೇಷ್ಠವಾದ ಹಲವು ಬಗೆಯ ಸಾಮಗ್ರಿಗಳಿಂದ ಅನೇಕ ಪ್ರಕಾರವಾದ ವಿಧಿ-ವಿಧಾನಗಳೊಡನೆ ನನ್ನ ಮೂರ್ತಿಯನ್ನು ಪೂಜೆಮಾಡಿದರೂ, ನಾನು ಆತನಲ್ಲಿ ಪ್ರಸನ್ನನಾಗುವುದಿಲ್ಲ.

अर्चादावर्चयेत्तावदीश्वरं मां स्वकर्मकृत्।
यावन्न वेद स्वहृदि सर्वभूतेष्ववस्थितम् ॥

ತನ್ನ ಹೃದಯದಲ್ಲಿಯೂ ಮತ್ತು ಸಂಪೂರ್ಣಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನ ಅನುಭವವು ಆಗುವವರೆಗೆ ಮನುಷ್ಯನು ತನ್ನ ಧರ್ಮಕ್ಕೆ ತಕ್ಕ ಕರ್ಮಗಳನ್ನು ಅನುಷ್ಠಾನಮಾಡುತ್ತಾ ಈಶ್ವರನಾದ ನನ್ನನ್ನು ಪ್ರತಿಮೆಯೇ ಮುಂತಾದವುಗಳಲ್ಲಿ ಆರಾಧಿಸಬೇಕು.

(ಭಾಗವತದ 'ಕಪಿಲೋಪದೇಶ' ದಿಂದ)

## ಜನಸಾಮಾನ್ಯರ ಏಳಿಗೆ

ವಿದ್ಯೆ ಮತ್ತು ಬುದ್ಧಿವಂತಿಕೆಗಳು ಜನಸಾಮಾನ್ಯರಲ್ಲಿ ಎಷ್ಟು ಹೆಚ್ಚು ಹರಡುವುವೋ ಅಷ್ಟು ಹೆಚ್ಚಾಗಿ ಆ ರಾಷ್ಟ್ರ ಅಭಿವೃದ್ಧಿಯಾಗುವುದೆಂದು ನನಗೆ ತೋರುವುದು... ನಾವು ರಾಷ್ಟ್ರವ್ಯಕ್ತಿತ್ವವನ್ನು ಕಳೆದುಕೊಂಡಿರುವೆವು. ಕಳೆದುಕೊಂಡ ಆ ವ್ಯಕ್ತಿತ್ವವನ್ನು ದೇಶಕ್ಕೆ ಪುನಃ ನೀಡಬೇಕು. ಶಿಕ್ಷಣವನ್ನು ನೀಡಿ ಜನಸಮೂಹವನ್ನು ಮೇಲಕ್ಕೆತ್ತಿ, ಕಳೆದುಕೊಂಡ ಅವರ ವ್ಯಕ್ತಿತ್ವವನ್ನು ಪುನಃ ಕೊಡಮಾಡುವುದೇ ಕೆಳವರ್ಗದ ಜನರಿಗೆ ಮಾಡಬೇಕಾದ ಏಕೈಕ ಸೇವೆ. ಅವರಿಗೆ ವಿಚಾರಗಳನ್ನು ನೀಡಬೇಕು. ಅವರ ಸುತ್ತಮುತ್ತಲಿನ ಆಗುಹೋಗುಗಳ ಬಗೆಗೆ ಅವರು ಕಣ್ಣು ತೆರೆಯುವಂತೆ ಮಾಡಬೇಕು. ಆ ಬಳಿಕ ಅವರು ತಮ್ಮ ಮುಕ್ತಿಗಾಗಿ ತಾವೇ ದುಡಿಯುವರು. ಭಾರತದಲ್ಲಿ ಇಂದು ಮಾಡಬೇಕಾಗಿರುವ ಕಾರ್ಯವೆಂದರೆ ಇದೇ.

ಜನರಿಗೆ ಸ್ವಾವಲಂಬಿಗಳಾಗಲು ತಿಳಿಸದಿದ್ದಲ್ಲಿ, ಇಡೀ ಜಗತ್ತಿನ ಎಲ್ಲಾ ಸಂಪತ್ತು ಕೂಡ ಭರತಖಂಡದ ಒಂದು ಚಿಕ್ಕ ಹಳ್ಳಿಗೆ ಸಹಾಯ ನೀಡಲು ಸಾಕಾಗಲಾರದು. ನಮ್ಮ ಕೆಲಸ ಮುಖ್ಯವಾಗಿ ನೈತಿಕ ಮತ್ತು ಬೌದ್ಧಿಕ ಶಿಕ್ಷಣವನ್ನು ನೀಡುವುದಾಗಿರಬೇಕು.

'ಪ್ರತಿಯೊಬ್ಬನೂ ಸ್ವಪ್ರಯತ್ನದಿಂದ ತನ್ನ ಮೇಲ್ಮೆಯನ್ನು ಸಾಧಿಸಿಕೊಳ್ಳಬೇಕು' ಎಂಬ ಮಾತು ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುವುದು. ತಮಗೆ ತಾವೇ ಸಹಾಯ ಮಾಡಿಕೊಳ್ಳುವುದಕ್ಕೆ ನಾವು ಅವರಿಗೆ ಸಹಾಯ ಮಾಡಬೇಕು. ಯಾವಾಗ ಅವರು ತಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಹಾಯ ಮತ್ತು ಅಭಿವೃದ್ಧಿಯ ಆವಶ್ಯಕತೆಯನ್ನು ತಿಳಿದುಕೊಳ್ಳುವರೋ, ಆಗ ನಿಮ್ಮ ಕೆಲಸ ಪ್ರಭಾವ ಬೀರಿದೆ ಎಂದು ತಿಳಿಯಿರಿ. ರೈತರು ಮತ್ತು ಕೂಲಿಕಾರರು ಮೃತಪ್ರಾಯ ಸ್ಥಿತಿಯಲ್ಲಿದ್ದಾರೆ. ಆ ಬಡಜನರು ತಮ್ಮ ಸ್ವಂತಶಕ್ತಿಗಳನ್ನು ಹಿಂದಿರುಗಿ ಪಡೆಯುವಂತೆ ಶ್ರೀಮಂತರು ಸಹಾಯಮಾಡಬೇಕು. ಅನಂತರ ರೈತರನ್ನೂ ಕೂಲಿಕಾರರನ್ನೂ ತಮ್ಮ ಸಮಸ್ಯೆಗಳನ್ನು ತಾವೇ ಎದುರಿಸಿ ನಿವಾರಿಸಿಕೊಳ್ಳುವುದಕ್ಕೆ ಬಿಡಿ.

–ಸ್ವಾಮಿ ವಿವೇಕಾನಂದ

## ‘ವಿವೇಕಪ್ರಭ’ ಪತ್ರಿಕೆಯ ವತಿಯಿಂದ

# ಶ್ರೀರಾಮಕೃಷ್ಣ ಭಕ್ತ ಸಮಾವೇಶ – 2010

**23.10.2010 ಮತ್ತು 24.10.2010 ; ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ; ಈಗಿನ ಕಾಲದ ಯಾಂತ್ರಿಕ ಜೀವನಕ್ಕೆ ಜೀವಸಂಜೀವಿನಿಗಳಾಗಿವೆ. ಕಷ್ಟಕಾರ್ಪಣ್ಯಗಳಿಂದ ನೊಂದ ಮನಸ್ಸಿಗೆ ಸಾಂತ್ವನವನ್ನೂ, ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ನೀಡುವ ಈ ಉದಾತ್ತ ಚಿಂತನೆಗಳನ್ನು ಭಕ್ತರು ಒಟ್ಟಾರೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಆ ಸುಸಂದರ್ಭ ಈಗ ಒದಗಿಬಂದಿದ್ದು, ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ **‘ಶ್ರೀರಾಮಕೃಷ್ಣ ಭಕ್ತ ಸಮಾವೇಶ – 2010’** ಅನ್ನು ಆಯೋಜಿಸಲಾಗಿದೆ.

ಎರಡು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ ಜೀವನ–ಸಂದೇಶಗಳ ಆಲೋಚನೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಸೇವೆಯನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ ನಾಡಿನ ಸುಪ್ರಸಿದ್ಧ ಭಾಷಣಕಾರರಾದ ಬೇಲಿ ಮಠದ ಶ್ರೀಶಿವಾನುಭವ ಚರಮೂರ್ತಿ ಪರಮಪೂಜ್ಯ ಶ್ರೀಶಿವರುದ್ರ ಮಹಾಸ್ವಾಮಿಗಳು ಮತ್ತು ಶ್ರೀ ಹಿರೇಮಗಳೂರು ಕಣ್ಣನ್ ಅವರಿಂದ ಉದ್ಬೋಧಕ ಪ್ರವಚನಗಳು ಮತ್ತು ಸಂಸ್ಕೃತ ಗ್ರಾಮ ಮತ್ತೂರಿನ ಶ್ರೀಮಾರ್ಕಂಡೇಯ ಅವಧಾನಿ ಮತ್ತು ಶ್ರೀ ಕುಮಾರಸ್ವಾಮಿ ಅವರಿಂದ ‘ಕುಮಾರವ್ಯಾಸ ಭಾರತ ಕಾವ್ಯವಾಚನ, ವ್ಯಾಖ್ಯಾನ’ – ಇವುಗಳನ್ನೂ ಏರ್ಪಡಿಸಲಾಗಿದೆ. ಅದಲ್ಲದೆ ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯ ಜೊತೆಗೆ, ಭಾಷಣಗಳ ಮಧ್ಯೆ ‘ನಾಮಸಂಕೀರ್ತನೆ’ ಕಾರ್ಯಕ್ರಮವೂ ಇರುತ್ತದೆ. ಈ ಸಮಾವೇಶದಲ್ಲಿ ರಾಮಕೃಷ್ಣ ಮಹಾಸಂಘವು ಕರ್ನಾಟಕದಲ್ಲಿ ಹೊರತರುತ್ತಿರುವ ಏಕೈಕ ಪತ್ರಿಕೆಯಾದ ‘ವಿವೇಕಪ್ರಭ’ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ಆಶ್ರಮಕ್ಕೆ ಅತಿ ಹತ್ತಿರವಿರುವ ಎರಡು ಸುಸಜ್ಜಿತ ಕಲ್ಯಾಣ ಮಂಟಪಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದ್ದು, ಎಲ್ಲ ರೀತಿಯಲ್ಲಿಯೂ ವಾಸ್ತವ್ಯ ಸುಖಕರವಾಗಿರುವುದಕ್ಕೆ ಏರ್ಪಾಡು ಮಾಡಲಾಗಿದೆ. ಉತ್ತಮ ಗುಣಮಟ್ಟದ ಪ್ರಸಾದ ವ್ಯವಸ್ಥೆಗೂ ಸಿದ್ಧತೆಗಳು ಭರದಿಂದ ಸಾಗಿವೆ. ಸಮರ್ಪಣಾಭಾವದ ಸ್ವಯಂಸೇವಕರು ಬರುವ ಭಕ್ತರಿಗೆ ಎಲ್ಲ ರೀತಿಯ ಸೌಲಭ್ಯವನ್ನೂ ಸಹಕಾರವನ್ನೂ ನೀಡುವುದಕ್ಕೆ ಸದಾ ಸನ್ನದ್ಧರಾಗಿ ಇರುತ್ತಾರೆ.

1. ಕಾಣಿಕೆ : ರೂ.350/– ಮಾತ್ರ
2. ಶಿಬಿರಾರ್ಥಿಗಳು 22.10.2010 ರ ಸಾಯಂಕಾಲ 6 ಗಂಟೆಯ ಮೇಲೆ ಬರಬೇಕು ಮತ್ತು 24.10.2010 ರಂದು, ಸಂಜೆ 6.30 ರ ನಂತರ ತೆರಳಬೇಕಾಗುತ್ತದೆ.
3. ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ ರೂ.350/– ಅನ್ನು ಡಿ.ಡಿ. ಕಳುಹಿಸಿ ನೋಂದಾಯಿಸಿಕೊಳ್ಳಬಹುದು. ಅವರಿಗೆ 10 ರಸೀದಿಗಳು ಇರುವ ಒಂದು ರಸೀದಿಪುಸ್ತಕವನ್ನು ಕಳಿಸಲಾಗುವುದು. ಅವರು ಆಗಸ್ಟ್ 30 ರ ಒಳಗೆ ವಿವೇಕಪ್ರಭ ಚಂದಾ ಮಾಡಿಸಲು ಪ್ರಯತ್ನಿಸಬೇಕು. ಆಗಸ್ಟ್ 30 ರ ನಂತರ ಚಂದಾಹಣವನ್ನು ಕಳುಹಿಸಿದರೆ, ತಮಗೆ ಸೂಚನಾಪತ್ರವನ್ನು ಅಂಚೆಯ ಮೂಲಕ ಕಳಿಸಲಾಗುವುದು. ಅದು ಸಾಧ್ಯವಾಗದಿದ್ದರೂ, ಆದ್ಯತೆಯ ಪ್ರಕಾರ ನಿಮಗೆ ಶಿಬಿರಕ್ಕೆ ಬರಬೇಕಾದ ಸೂಚನೆಯನ್ನು ತಲುಪಿಸಲಾಗುವುದು. ‘ವಿವೇಕಪ್ರಭ’ ಚಂದಾ ಮಾಡಿಸುವುದನ್ನು ಈ ಸಮಾವೇಶಕ್ಕೆ ಆದ್ಯತೆಯೆಂದು ಪರಿಗಣಿಸಲಾಗುವುದೇ ಹೊರತು ಇದು ನಿರ್ಬಂಧವಲ್ಲ.
4. ಕೇವಲ 350 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಒಡನೇ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ.
5. ಹಣವನ್ನು ಕೇವಲ ಡಿ.ಡಿ. ಮೂಲಕ **‘Sri Ramakrishna Ashrama, Viveka prabha A/c’** ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ “ವಿವೇಕಪ್ರಭ ಭಕ್ತ ಸಮಾವೇಶ – 2010’ ಎಂದು ನಮೂದಿಸಿರಬೇಕು.
6. ಪತ್ರದಲ್ಲಿ ಹೆಸರು, ವಿಳಾಸ, ಫೋನ್ ನಂಬರ್, ಇ–ಮೈಲ್ ವಿಳಾಸ, ವಯಸ್ಸುಗಳನ್ನು ನಮೂದಿಸಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು.
7. ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.
8. ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ : **‘ವಿವೇಕಪ್ರಭ ಭಕ್ತ ಸಮಾವೇಶ – 2010’, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020**

# “ಸ್ಮರಣೆ ಒಂದೇ ಸಾಲದೆ ಗೋವಿಂದನ”

## (ಭಾಗವತದ ಬೋಧನೆ)

**“ವಿಶ್ವೇಶ್ವರನೂ ವಿಶ್ವಾತ್ಮನೂ ವಿಶ್ವಮೂರ್ತಿಯೂ ಆಗಿರುವ ಪ್ರಭುವೇ, ಸ್ವಜನರಾಗಿರುವ ಈ ಪಾಂಡವರಲ್ಲಿಯೂ ಮತ್ತು ಯಾದವರಲ್ಲಿಯೂ ನನಗೆ ದೃಢವಾದ ಮಮತೆ ಬೆಳೆದುಬಿಟ್ಟಿದೆ. ಈ ಪ್ರಾಕೃತವಾದ ಪ್ರೇಮದ ಪಾಶವನ್ನು ಕತ್ತರಿಸಿಹಾಕು. ನಿನ್ನಲ್ಲಿಯೇ ನಿರಂತರವಾದ ಪ್ರೇಮವು ಹರಿಯುವಂತೆ ಮಾಡು. ಓ, ಪರಮಾನಂದಸ್ವರೂಪನಾದ ಮಧುಪತಿಯೇ, ಗಂಗೆಯ ಅಖಂಡ ಪ್ರವಾಹವು ಸಮುದ್ರದಲ್ಲಿಯೇ ಸದಾ ಹೋಗಿ ಸೇರುತ್ತಿರುವಂತೆ, ನನ್ನ ಬುದ್ಧಿಯೂ ನಿನ್ನಲ್ಲಿಯೇ ಪ್ರೇಮರಸಪೂರ್ಣವಾಗಿ ಹರಿಯುತ್ತಿರಲಿ; ಅಲ್ಲಿಯೇ ವಿಶ್ರಾಂತಿ ಹೊಂದಲಿ.”**

*– ಭಾಗವತದಲ್ಲಿ ಕುಂತಿಯ ಪ್ರಾರ್ಥನೆ*

### ಕೃಷ್ಣಚೇತಸರು

**ಜ**ರಾಸಂಧ ಮಗಧ ದೇಶದ ರಾಜ. ಅವನು ದುಷ್ಟ. ನೂರಾರು ರಾಜರನ್ನು ಸೋಲಿಸಿ ಅವರನ್ನು ಸೆರೆಮನೆಯಲ್ಲಿ ಇಟ್ಟಿದ್ದ. ಶ್ರೀಕೃಷ್ಣನು ಅರ್ಜುನ ಮತ್ತು ಭೀಮರೊಂದಿಗೆ ಅವನ ರಾಜ್ಯಕ್ಕೆ ಹೋದ. ಭೀಮ ಮತ್ತು ಜರಾಸಂಧರ ನಡುವೆ ದ್ವಂದ್ವ ಯುದ್ಧ ನಡೆಯಿತು. ಭೀಮ ಜರಾಸಂಧನನ್ನು ಕೊಂದ. ಶ್ರೀಕೃಷ್ಣ ಸೆರೆಮನೆಯಲ್ಲಿದ್ದ ರಾಜರನ್ನು ಬಿಡಿಸಿದ. ಆಗ ಆ ರಾಜರು ಶ್ರೀಕೃಷ್ಣನನ್ನು ಏನು ಬೇಕೆಂದು ಪ್ರಾರ್ಥಿಸಿದರು ಗೊತ್ತೇ?

**ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ ।**
**ಸ್ಮೃತಿರ್ಯಥಾ ನ ವಿರಮೇದಪಿ ಸಂಸರತಾಮಿಹ ॥**

(ಶ್ರೀಮದ್ಭಾಗವತ, ೧೦.೭೩.೧೫)

“ಕೃಷ್ಣ, ನಾವು ಸಂಸಾರದಲ್ಲಿ ಇದ್ದರೂ ನಿನ್ನ ಚರಣಕಮಲಗಳ ಸ್ಮರಣೆಯು ಯಾವುದರಿಂದ ಕಳೆದುಹೋಗದೋ ಅಂತಹ ಉಪಾಯವನ್ನು ನಮಗೆ ಉಪದೇಶಿಸು.”

ಗೋಪಿಕಾಸ್ತ್ರೀಯರು ಪಂಡಿತರೇನಲ್ಲ, ಧ್ಯಾನ–ಯೋಗಗಳಲ್ಲಿ ನಿಷ್ಣಾತರೇನಲ್ಲ. ಆದರೆ ಪರಿಶುದ್ಧ ಹೃದಯದಿಂದ ಶ್ರೀಕೃಷ್ಣನನ್ನು ಪ್ರೀತಿಸಿದವರು; ಅವನ ಕೃಪೆಯಿಂದ ಅವನ ಮಾಹಾತ್ಮ್ಯವನ್ನು ತಿಳಿದುಕೊಂಡು ಧನ್ಯರಾದವರು. ಅವರು ಶ್ರೀಕೃಷ್ಣನಲ್ಲಿ ಮಾಡಿದ ಕಟ್ಟಕಡೆಯ ಪ್ರಾರ್ಥನೆ ಅತ್ಯಂತ ಮನೋಜ್ಞವಾದುದು: “ಹೇ ಭಗವಾನ್, ನಿನ್ನ ಪಾದಾರವಿಂದಗಳನ್ನು ಅಪಾರ ಜ್ಞಾನಿಗಳಾದ ಯೋಗೀಶ್ವರರು ತಮ್ಮ ಹೃದಯಗಳಲ್ಲಿ ಧ್ಯಾನಮಾಡುತ್ತಾರೆ. ಆ ಪಾದಗಳೇ ಸಂಸಾರಕೂಪದಲ್ಲಿ ಬಿದ್ದಿರುವವರನ್ನು ಮೇಲೆತ್ತುವ ಉತ್ತಮ ಸಾಧನವಾಗಿದೆ. ಅಂಥ ನಿನ್ನ ಪಾದಗಳನ್ನು ಕೌಟುಂಬಿಕ ಕಾರ್ಯಗಳಲ್ಲಿ ಮುಳುಗಿದ್ದರೂ ನಾವು ಯಾವಾಗಲೂ ಸ್ಮರಿಸುವಂತೆ ನಮ್ಮನ್ನು ಅನುಗ್ರಹಿಸು.” ಭಗವಂತನಲ್ಲಿ ನಮ್ಮೆಲ್ಲರ ಪ್ರಾರ್ಥನೆಯೂ ಇದೇ ಆಗಿರಬೇಕಲ್ಲವೇ?

ಈ ಬಗೆಯ ಸ್ಥಿತಿ ಸಾಧ್ಯವೇ? ಶ್ರೀಶುಕಮಹರ್ಷಿಗಳು ಅದಕ್ಕೆ ಒಂದು ನಿದರ್ಶನವನ್ನು ನೀಡುತ್ತಾರೆ. ಶ್ರೀಕೃಷ್ಣನು ಜನಿಸಿದ್ದು ಯಾದವ ಕುಲಕ್ಕೆ ಸೇರಿದ ವೃಷ್ಣಿ ಎಂಬ ಪಂಗಡದಲ್ಲಿ. ಅವರೆಲ್ಲ ಶ್ರೀಕೃಷ್ಣಭಕ್ತರು. – **ನ ವಿದುಃ ಸಂತಮಾತ್ಮಾನಂ ವೃಷ್ಣಯಃ ಕೃಷ್ಣಚೇತಸಃ** – ಅವರು ‘ಕೃಷ್ಣಚೇತಸ’ರಾಗಿಬಿಟ್ಟಿದ್ದರಂತೆ. ಅಂದರೆ ಅವರ ಮನಸ್ಸು ಸಂಪೂರ್ಣವಾಗಿ ಕೃಷ್ಣನಲ್ಲಿ ಲೀನವಾಗಿಹೋಗಿತ್ತು. ಹೀಗಾಗಿ ಅವರು ತಮ್ಮ ವ್ಯಕ್ತಿಗತ ಅಸ್ತಿತ್ವವನ್ನೇ ಮರೆತುಬಿಟ್ಟಿದ್ದರು. ಮಲಗಿಕೊಂಡಾಗ, ಕುಳಿತುಕೊಂಡಾಗ, ಓಡಾಡುತ್ತಿರುವಾಗ, ಮಾತನಾಡುತ್ತಿರುವಾಗ, ಆಟವಾಡುತ್ತಿರುವಾಗ, ಸ್ನಾನಮಾಡುತ್ತಿರುವಾಗ, ಊಟಮಾಡುತ್ತಿರುವಾಗ – ಹೀಗೆ ಎಲ್ಲಾ ಸಮಯದಲ್ಲಿಯೂ ಅವರು ಕೃಷ್ಣಚೇತಸರೇ ಆಗಿಬಿಟ್ಟಿದ್ದರು.


### ಸಾಧನೆಯ ತಿರುಳು – ಸ್ಮರಣೆ

ಉದ್ಧವ ಯದುಕುಲಕ್ಕೆ ಸೇರಿದವನು; ಶ್ರೀಕೃಷ್ಣನ ಏಕಾಂತಭಕ್ತ. ಅಂಥವನೂ ಗೋಪಿಯರನ್ನು ತುಂಬುಕಂಠದಿಂದ ಹೊಗಳುತ್ತಾನೆ. “ನೀವು ಇಡೀ ಲೋಕಕ್ಕೆ ಪೂಜನೀಯರು” ಎಂದು ಪ್ರಶಂಸಿಸುತ್ತಾನೆ. ಏತಕ್ಕೆ ಗೊತ್ತೆ? **ವಾಸುದೇವೇ ಭಗವತಿ ಯಾಸಾಮ್ ಇತಿ ಅರ್ಪಿತಂ ಮನಃ** – “ನಿಮ್ಮ ಮನಸ್ಸುಗಳೆಲ್ಲವೂ ಭಗವಂತನಾದ ವಾಸುದೇವನಿಗೆ ಅರ್ಪಿತವಾಗಿಬಿಟ್ಟಿವೆ.”

ಸ್ಮರಣೆಯ ಮಹತ್ತ್ವವನ್ನು ಶ್ರೀಕೃಷ್ಣನೇ ಉದ್ಧವನಿಗೆ ಹೀಗೆ ಮನಗಾಣಿಸುತ್ತಾನೆ: “ಉದ್ಧವಾ, ನನ್ನ ಶಿಷ್ಯರಾದ ಸನಕಾದಿಗಳಿಗೆ ನಾನು ಉಪದೇಶಿಸಿದ ಯೋಗ ಇಷ್ಟೇ : **ಸರ್ವತೋ ಮನ ಆಕೃಷ್ಯ ಮಯ್ಯಾವೇಶ್ಯತೇ ಯಥಾ,** ಎಲ್ಲ ಕಡೆಗಳಿಂದ ಮನಸ್ಸನ್ನು ಸೆಳೆದು ನನ್ನಲ್ಲಿಯೇ ಇಡುವಂಥ ವಿಧಾನವೇ ಅದು.”

ಭಗವತ್‌ಸ್ಮರಣೆಯ ಸಿದ್ಧಿಯೇ ಎಲ್ಲ ಸಾಧನಗಳ ಚರಮಹಂತ ಎಂದು ಶ್ರೀಶುಕಮಹರ್ಷಿಗಳು ಹೇಳುತ್ತಾರೆ: “ಜ್ಞಾನ, ಯೋಗ, ಕರ್ಮಮಾರ್ಗಗಳನ್ನು ಅಭ್ಯಾಸ ಮಾಡುವುದರ ಗುರಿ ಏನು ಗೊತ್ತೇ? **ಅಂತೇ ನಾರಾಯಣ ಸ್ಮೃತಿಃ** – ಮರಣಸಮಯದಲ್ಲಿ ನಾರಾಯಣನ ಸ್ಮೃತಿಯನ್ನು ಪಡೆದುಕೊಳ್ಳುವುದು. ಇದೇ **ಜನ್ಮಲಾಭಃ ಪರಃ,** ಜೀವನದ ಅತ್ಯಂತ ಶ್ರೇಷ್ಠ ಉದ್ದೇಶವಾಗಿದೆ.”

ಆಧ್ಯಾತ್ಮಿಕ ಸಾಧನೆಗಳ ಅಂಗಗಳಾಗಿ ಅಧ್ಯಯನ, ತಪಸ್ಸು, ಪ್ರಾಣಾಯಾಮ, ಇತರರಲ್ಲಿ ಮೈತ್ರೀಭಾವ, ತೀರ್ಥಯಾತ್ರೆ, ಕೊಡುಗೈ ದಾನ, ಮಂತ್ರಜಪ – ಇವೆಲ್ಲವನ್ನೂ ಮಾಡುತ್ತೇವೆ. ಆದರೆ ಭಗವಂತನನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳದೇ, ಈ ಎಲ್ಲ ಸಾಧನೆಗಳೂ **ನ ಆತ್ಯಂತ ಶುದ್ಧಿಂ ಲಭತೇ** – ಮನಸ್ಸನ್ನು ಪರಿಶುದ್ಧಗೊಳಿಸಲಾರವು. ಅಂದರೆ ಕೇವಲ ಆಚರಣೆಗಳು ಮಾನಸಿಕ ಪರಿವರ್ತನೆಯನ್ನು ಉಂಟುಮಾಡವು. ಅವುಗಳಿಂದ ಒಡಗೂಡಿದ ಭಗವಂತನ ಸ್ಮರಣೆ ಮಾತ್ರವೇ, ಚಿತ್ತಶುದ್ಧಿಯನ್ನು ನೀಡಬಲ್ಲುದು.



ಕಪಿಲನು ದೇವಹೂತಿಗೆ ಉಪದೇಶಿಸುತ್ತಿರುವುದು

ಆದುದರಿಂದಲೇ ಪರೀಕ್ಷಿತ ಮಹಾರಾಜನಿಗೆ ಶುಕಮುನಿಯು ಹೀಗೆ ಎಚ್ಚರಿಕೆ ಕೊಡುತ್ತಾನೆ: "ರಾಜನ್, ನಿನಗೆ ಮರಣಕಾಲ ಸನ್ನಿಹಿತವಾಗಿದೆ. **ತಸ್ಮಾತ್ ಸರ್ವಾತ್ಮನಾ ರಾಜನ್ ಹೃದಿಸ್ಥಂ ಕುರು ಕೇಶವಂ,** ಆದ್ದರಿಂದ ಕೇಶವನನ್ನು ಹೃದಯದಲ್ಲಿ ದೃಢವಾಗಿ ಧರಿಸು. ಇದರಿಂದ ನಿನಗೆ ಶ್ರೇಷ್ಠವಾದ ಗತಿಯು ಲಭಿಸುತ್ತದೆ. ಮರಣಕಾಲದಲ್ಲಿ ತನ್ನ ಭಾವವನ್ನು ತಳೆದು ಧ್ಯಾನಿಸುವವನನ್ನು, ಸರ್ವರಿಗೂ ಆಶ್ರಯನಾದ ಭಗವಂತನು ತನ್ನೆಡೆಗೆ ಕರೆದು ಕೊಳ್ಳುತ್ತಾನೆ."

## ಸ್ಮರಣೆಯ ಗಳಿಕೆ

ನಮಗೆ ಪ್ರಾಪಂಚಿಕ ವಿಷಯಗಳ ಬಗ್ಗೆ ತುಂಬ ಆಕರ್ಷಣೆ ಇರುತ್ತದೆ. ಇದಕ್ಕೆ ಕಾರಣ ಏನು? **ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷು ಉಪಜಾಯತೇ, ಸಂಗಾತ್ ಸಂಜಾಯತೇ ಕಾಮಃ** (*ಭಗವದ್ಗೀತೆ, ೨:೬೨*) – ಸಾಮಾನ್ಯವಾಗಿ ಪ್ರಾಪಂಚಿಕ ವಿಷಯಗಳನ್ನೇ ನಾವು ಮನಸ್ಸಿನಲ್ಲಿ ಮೆಲುಕುಹಾಕುತ್ತ ಇರುತ್ತೇವೆ. ಅದರಿಂದ ಅವುಗಳ ಜೊತೆಗೆ ಸಂಗ ಏರ್ಪಡುತ್ತದೆ. ಈ ಬಗೆಯ ಸಂಗದಿಂದ, ಅವುಗಳನ್ನು ಪಡೆದುಕೊಳ್ಳಬೇಕು ಎಂಬ ಆಸೆ ಉಂಟಾಗುತ್ತದೆ. ಇದಕ್ಕೆ ಪರಿಹಾರವಾಗಿ, "ವಿಷಯಗಳನ್ನು ಆಲೋಚಿಸುವ ಬದಲಾಗಿ ನನ್ನನ್ನು ಸ್ಮರಿಸು" ಎಂದು ಭಗವಂತನು ಹೇಳುತ್ತಾನೆ.

**ವಿಷಯಾನ್ ಧ್ಯಾಯತಃ ಚಿತ್ತಂ ವಿಷಯೇಷು ವಿಷಜ್ಜತೇ ।**
**ಮಾಮ್ ಅನುಸ್ಮರತಃ ಚೇತೋ ಮಾಮೇವ ಪ್ರವಿಲೀಯತೇ ॥**

"ವಿಷಯವಸ್ತುಗಳನ್ನು ಚಿಂತಿಸುತ್ತಿರುವ ಮನಸ್ಸು ಅವುಗಳ ಸ್ವರೂಪವನ್ನೇ ತಾಳುತ್ತದೆ. ನನ್ನನ್ನು ಅನುಗಾಲವೂ ಸ್ಮರಿಸುತ್ತಿರುವ ಮನಸ್ಸು ನನ್ನಲ್ಲೇ ಏಕೀಭಾವವನ್ನು ಹೊಂದುತ್ತದೆ."

ಸಿದ್ಧಿಯ ಸ್ಥಿತಿಯಲ್ಲಿ ಯಾವುದು ಸಹಜವಾಗುವುದೋ, ಅದನ್ನೇ ಸಾಧನೆಯಾಗಿ ಶಾಸ್ತ್ರಗಳಲ್ಲಿ ಉಪದೇಶಿಸುತ್ತಾರೆ. ಅದೇ ರೀತಿ ಭಗವಂತನ ಸ್ಮರಣೆಯು ತಾನೇತಾನಾಗಿ ಆಗುವವರೆಗೂ, ಅದರ ಅಭ್ಯಾಸವನ್ನು ಪ್ರಜ್ಞಾಪೂರ್ವಕವಾಗಿ ಸಾಧಕನು ಕೈಗೊಳ್ಳಬೇಕಾಗುತ್ತದೆ. ಇದಕ್ಕಾಗಿ ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದು ಮುಖ್ಯ. ಅದನ್ನೂ ಶ್ರೀಕೃಷ್ಣನೇ ಹೀಗೆ ಹೇಳಿಕೊಡುತ್ತಾನೆ: "ವಿಷಯವಸ್ತುಗಳು ಸ್ವಪ್ನದಲ್ಲಿ ಉಂಟಾಗುವ ದೃಶ್ಯಗಳಂತೆ ಅನಿತ್ಯವಾದುವು. ಆದ್ದರಿಂದ ಅವುಗಳನ್ನು ಮನಸ್ಸಿನಿಂದ ಹೊರದೂಡಿ, ನನ್ನ ಮೇಲಿನ ಭಕ್ತಿಭಾವದಿಂದ ಕೂಡಿದವನಾಗಿ, ನನ್ನಲ್ಲೇ ಮನಸ್ಸನ್ನು ಏಕಾಗ್ರಗೊಳಿಸು."

ಈ ಬಗೆಯ ಏಕಾಗ್ರಸ್ಥಿತಿಯನ್ನು ಗಳಿಸಲು ಮಾನಸಿಕ ಪರಿಶುದ್ಧತೆ ಅತ್ಯವಶ್ಯಕ. ಇದನ್ನು ಸಾಧಿಸಲು ಭಗವದ್ಭಕ್ತಿಯಿಂದ ಒಡಗೂಡಿ ಆಧ್ಯಾತ್ಮಿಕ ಸಾಧನೆಯನ್ನು ಮಾಡಬೇಕಾಗುತ್ತದೆ. ಅವತಾರಪುರುಷನಾದ ಭಗವಾನ್ ಕಪಿಲನು ತನ್ನ ತಾಯಿಯಾದ ದೇವಹೂತಿಗೆ ಇದನ್ನು ಸಂಕ್ಷಿಪ್ತವಾಗಿ ಹೀಗೆ ಬೋಧಿಸುತ್ತಾನೆ:

೧. ಭಕ್ತಿಯೋಗವು ಅತ್ಯಂತ ಶ್ರೇಷ್ಠವಾದುದು. ಇದರ ಅಭ್ಯಾಸದಿಂದ ನನ್ನ ಭಾವವನ್ನು ಪಡೆಯಲು ಜೀವಿಯು ಅರ್ಹನಾಗುತ್ತಾನೆ. ಅದಕ್ಕಾಗಿ ಮೊದಲು, ಮಾಡಬೇಕಾದ ಕರ್ತವ್ಯಗಳನ್ನು ನಿರ್ಲಿಪ್ತತೆಯಿಂದಲೂ ಭಗವಂತನಿಗೆ ಅರ್ಪಿತವೆಂಬ ಭಾವನೆಯಿಂದಲೂ ಮಾಡಬೇಕು. ಪೂಜೆ ಮುಂತಾದವು ಭಕ್ತಿಭಾವವನ್ನು ಹೆಚ್ಚಿಸುವ ಉದ್ದೇಶದಿಂದ ಮಾತ್ರ ಕೂಡಿರಬೇಕೇ ಹೊರತು, ಇದರಿಂದ ಇತರ ಜೀವಿಗಳಿಗೆ ಯಾವುದೇ ರೀತಿಯ ಹಿಂಸೆ ಉಂಟಾಗಬಾರದು.

೨. ನನ್ನ ಸಾನ್ನಿಧ್ಯವನ್ನು ಸಂಕೇತಿಸುವ, ಪವಿತ್ರಸ್ಥಾನಗಳಲ್ಲಿ ಇರುವ ಪೂಜಾವಿಗ್ರಹಗಳನ್ನು ದೃಷ್ಟಿಸಬೇಕು, ಸ್ಪರ್ಶಿಸಬೇಕು, ಆರಾಧಿಸಬೇಕು ಮತ್ತು ಪ್ರಶಂಸಿಸಬೇಕು. ಭಕ್ತಿ ಎನ್ನುವುದು ಕೇವಲ ವಿಗ್ರಹಾರಾಧನೆಗೆ ಮಾತ್ರವೇ ಸೀಮಿತವಾಗಬಾರದು. **ಭೂತೇಷು ಮದ್ಭಾವನಯಾ** – ಎಲ್ಲ ಜೀವಿಗಳಲ್ಲಿಯೂ ನನ್ನ ಭಾವವನ್ನೇ ಕಾಣಬೇಕು. ಹಾಗೆಯೇ ಎಲ್ಲ ಪ್ರಾಪಂಚಿಕ ವಸ್ತುಗಳ ವಿಷಯದಲ್ಲೂ ನಿಸ್ಸಂಗವನ್ನು ಅಭ್ಯಾಸಮಾಡಬೇಕು.

೩. ಮಹಾತ್ಮರನ್ನು ಗೌರವಿಸಬೇಕು. ದೀನರಿಗೆ ಅನುಕಂಪೆಯನ್ನು ತೋರಬೇಕು. ಸಮಾನಸ್ತರದವರಲ್ಲಿ ಮೈತ್ರಿ ಇರಬೇಕು. ಬಾಹ್ಯೇಂದ್ರಿಯಗಳ (ಯಮ) ಮತ್ತು ಮನಸ್ಸಿನ ನಿಯಂತ್ರಣವನ್ನು (ನಿಯಮ) ಕೈಗೊಳ್ಳಬೇಕು.

೪. ಆಧ್ಯಾತ್ಮಿಕ ಗ್ರಂಥಗಳನ್ನು ನಿಯಮಿತವಾಗಿ ಅಧ್ಯಯನ ಮಾಡಬೇಕು. ಭಗವಂತನ ನಾಮಸಂಕೀರ್ತನೆಯನ್ನು ಪ್ರೀತಿ ಭಾವದಿಂದ ಮಾಡಬೇಕು. ನೇರ ನಡೆ–ನುಡಿ, ನಿಃಸ್ವಾರ್ಥ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕು. ಸಾಧುಸಂಗವನ್ನು ಇಚ್ಛಿಸಬೇಕು.

**ಮದ್ಧರ್ಮಣೋ ಗುಣೈರೇತೈಃ ಪರಿಸಂಶುದ್ಧ ಆಶಯಃ ।**
**ಪುರುಷಸ್ಯ ಅಂಜಸಾಭ್ಯೇತಿ ಶ್ರುತಮಾತ್ರಗುಣಂ ಹಿ ಮಾಂ ॥**